**ಓ ಎಸ್ ನಂಃ 455-14**
**ಪಿ ಡಬ್ಲ್ಯೂ ಃ 2**

**ದಿಃ 18-12-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 18 ನೇ ಪ್ರತಿವಾದಿ ಪರ ಶ್ರೀ ಎಂ ಬಿ ಎಂ ವಕೀಲರಿಂದ**

ನಾನು ಡಿಗ್ರಿ ಓದಿದ್ದೇನೆ. ನನ್ನ ತಾಯಿ ಮತ್ತು ಚಿಕ್ಕಮ್ಮಂದಿರು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ತಾತ ಚೌಡಯ್ಯರವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಇದ್ದರೆಂದು ನನಗೆ ಗೊತ್ತಿಲ್ಲ, ನನ್ನ ತಾಯಿಯ ತಂದೆ ಚೌಡಯ್ಯರವರಿಗೆ ನಾಲ್ಕು ಜನ ಅಣ್ಣ ತಮ್ಮಂದಿರು ಅಂದರೆ ಸರಿ, ನನ್ನ ತಾತ ಯಾವಾಗ ತೀರಿಕೊಂಡಿದ್ದರು ಅಂದರೆ ನನಗೆ ಈಗ ಹೇಳಲು ನೆನಪಿಲ್ಲ. ಅವರು 70 ಇಸವಿ ಹಿಂದೆ ತೀರಿಕೊಂಡಿದ್ದರು ಅಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ.

71-72 ಇಸವಿಯಕಲ್ಲಿ 1 ನೇ ಪ್ರತಿವಾದಿಗೆ 17 ವರ್ಷ ವಯಸ್ಸು ಆಗಿತ್ತು ಅಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ, ಹಾಗೂ 7 ಮತ್ತು 12 ನೇ ಪ್ರತಿವಾದಿಗಳು ಅಪ್ರಾಪ್ತ ವಯಸ್ಕನವರಾಗಿದ್ದರು ಅಂದರೆ ಇರಬಹುದು. ದಿಃ26.04.71 ರಲ್ಲಿ ನನ್ನ ತಾತ ತೀರಿಕೊಂಡಿದ್ದ ಕಾರಣ ಅವರ ಅಣ್ಣ ತಮ್ಮಂದಿರು ನೋಂದಾಯಿತ ವಿಬಾಗ ಪತ್ರವನ್ನು ಮಾಡಿದ್ದರು ಅಂದರೆ ಸಾಕ್ಷಿ ನನ್ನ ತಾಯಿ ಯಾವುದೇ ವಿಭಾಗ ಆಗಿಲ್ಲ ಎಂದು ಹೇಳಿದ್ದರು ಎಂದು ಹೇಳುತ್ತಾರೆ.

ದಿಃ26.04.71 ರಂದು 1, 7 ಮತ್ತು 12 ನೇ ಪ್ರತಿವಾದಿಗಳು ದಾವಾ ಐಟಂ ನಂ 2 ಮತ್ತು 3 ನ್ನು ವೀರಕೆಂಪೇಗೌಡರವರಿಗೆ ಮಾರಾಟ ಮಾಡಿದ್ದರು ಅಂದರೆ ಸರಿಯಲ್ಲ, ಕುಟುಂಬದ ಪೋಷಣೆಗಾಗಿ ಹಾಗೂ ನನ್ನ ತಾಯಿಯು ಚಿಕ್ಕವಯಸ್ಸಿನವರಾಗಿದ್ದ ಕಾರಣ 1, 7 ಮತ್ತು 12 ನೇ ಪ್ರತಿವಾದಿಗಳಿಗೆ ಸದರಿ ಆಸ್ತಿಗಳನ್ನು ಮಾರಾಟ ಮಾಡಿದ್ದರು ಅಂದರೆ ಸರಿಯಲ್ಲ. ದಾವಾ ಐಟಂ ನಂ 2 ಮತ್ತು 3 ರಲ್ಲಿ ಈಗ ಯಾರು ಸ್ವಾಧೀನದಲ್ಲಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ 2 ಮತ್ತು 3 ವ್ಯವಸಾಯ ಜಮೀನಿಂದ ಈಗ ವ್ಯವಸಾಯೇತರ ಜಮೀನಿಗೆ ಬದಲಾವಣೆ ಆಗಿದೆ ಅಂದರೆ ಸರಿ, ಸದರಿ ಜಮೀನು ಕನ್‌ವರ್ಷನ್ ಆದ ನಂತರ ಮಾಗಡಿ ಟೌನ್ ಪ್ರಾಧಿಕಾರದಿಂದ ಅನುಮತಿ ಪಡೆದು ಖರೀದಿದಾರರು ಸ್ವಾಧೀನದಲ್ಲಿದ್ದಾರೆ ಅಂದರೆ ಸರಿ.

ದಾವಾ ಐಟಂ ನಂ 1 ಈಗ ನನ್ನ ತಾತನ ತಮ್ಮ ಹುಲಿತಿಮ್ಮಯ್ಯರವರ ಬಾಗಕ್ಕೆ ಹೋಗಿ ಅವರು ಸದರಿ ಆಸ್ತಿಯಲ್ಲಿ ಉಳಿಮೆ ಮಾಡುತ್ತಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಬಿಟ್ಟು ನಾವು ಬೇರೆ ಸ್ವತ್ತುಗಳನ್ನು ದಾವೆಯಲ್ಲಿ ಹಾಕಿಲ್ಲ ಅಂದರೆ ಸರಿ, 1 ನೇ

ಪ್ರತಿವಾದಿ ಹೆಸರಲ್ಲಿ ಸ ನಂ 166/3 ರಲ್ಲಿ 2 ಎಕರೆ 11 ಗುಂಟೆ ಜಮೀನು ಇದ್ದು ಅದನ್ನು ನಾವು ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ಅದೇ ರೀತಿ 7ನೇ ಪ್ರತಿವಾದಿ ಹೆಸರಲ್ಲಿರುವ ಸ ನಂ 166/3 ರಲ್ಲಿರುವ 9 ಗುಂಟೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸಾಕ್ಷಿ ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ 12ನೇ ಪ್ರತಿವಾದಿ ಹೆಸರಲ್ಲಿ ಸ ನಂ 166/3 ರಲ್ಲಿರುವ 9 ಗುಂಟೆ ಜಮೀನನ್ನು ಸಹ ಸೇರಿಸಿಲ್ಲ ಅಂದರೆ ಸರಿ.

ನನ್ನ ತಾತನ ಆಸ್ತಿಗಳನ್ನು ಮಾರಾಟ ಆಗಿ ಸದರಿ ಆಸ್ತಿಗಳು ಯಾರಾರ ಸ್ವಾಧೀನದಲ್ಲಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ, 18ನೇ ಪ್ರತಿವಾದಿ ಅವರು ದಾವಾ ಐಟಂ ನಂ 2 ಮತ್ತು 3ನ್ನು ಅವರ ಕಷ್ಟದ ಹಣದಿಂದ ಪಡೆದುಕೊಂಡು ಪ್ರಾಧಿಕಾರದಿಂದ ಆಸ್ತಿಯನ್ನು ಕನ್ವರ್ಷನ್ ಮಾಡಿಸಿ ಅವರೇ ಸ್ವಾಧೀನದಲ್ಲಿದ್ದಾರೆ ಅಂದರೆ ಸಾಕ್ಷಿ ಅದರ ಬಗ್ಗೆ ತಾಯಿಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ವಾದಿಗಳು, 1, 7 ಮತ್ತು 12ನೇ ಪ್ರತಿವಾದಿಗಳ ಜೊತೆಗೆ ಶಾಮೀಲಾಗಿ ಮಾರಾಟ ಮಾಡಿದ ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿದ್ದಾರೆ ಅಂದರೆ ಸರಿಯಲ್ಲ+ ಆದ ಕಾರಣ ಉಳಿದ ಮಾರಾಟ ಮಾಡಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದೇ ದಾವಾ ಸ್ವತ್ತುಗಳನ್ನು ಮಾತ್ರ ದಾವೆಯನ್ನು ದಾಖಲಿಸಿದ್ದೇವೆ ಅಂದರೆ ಸರಿಯಲ್ಲ.

ಸ ನಂ 165/3 ನ್ನು 71 ಇಸವಿಯಲ್ಲಿ ಮಾರಾಟ ಮಾಡಿದ ನಂತರ 2005 ಇಸವಿಯಲ್ಲಿ 1, 7 ಮತ್ತು 12ನೇ ಪ್ರತಿವಾದಿಗಳು ವೀರಕೆಂಪೇಗೌಡರವರಿಂದ ಆಸ್ತಿಯನ್ನು ಪುನಃ ಖರೀದಿ ಮಾಡಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಒ ಎಸ್ 85/2005 ರಲ್ಲಿ ದಾವಾ ಅನ್ನು ಸಲ್ಲಿಸಿ ರಾಜಿ ಅರ್ಜಿ ಮೂಲಕ ವೀರಕೆಂಪೇಗೌಡರವರಿಗೆ ಹಣವನ್ನು ಕೊಟ್ಟು ಆಸ್ತಿಯನ್ನು ಖರೀದಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ 12ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**